(ಇಂದು ದಿನಾಂಕ: 06-08-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ಶ್ರೀ ಆರ್ ಕೆ ಎನ್ ವಕೀಲರಿಂದ:**

1. ನನಗೆ ಕನ್ನಡ ಭಾಷೆ ಸ್ವಲ್ಪ ಸ್ವಲ್ಪ ಓದಲು ಬರೆಯಲು ಬರುತ್ತದೆ. ನಾನು 2005 ರಲ್ಲಿ ಜಾಲಿಹಾಳ ಗ್ರಾಮದಲ್ಲಿ ಜಮೀನಿನಲ್ಲಿ ವಾಸಮಾಡುತ್ತಿದ್ದೆ. ನಾನು 2005 ರಿಂದ ಪ್ರತಿವಾದಿಯರ ಜೊತೆ ಸಂಪರ್ಕ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ನನ್ನ ತಂದೆಯ ಕುಟುಂಬದ ವಂಶಾವಳಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

2. ನನ್ನ ತಾತನ ಹೆಸರು ಖಾಜಾಹುಸೇನ. ನನ್ನ ತಂದೆ ಹೆಸರು ಮೈಮೂದ್‌ಸಾಬ. ಆಧಾರ ಕಾರ್ಡ್ ನಲ್ಲಿ ಮೆಹಬೂಬಸಾಬ ಅಂತಾ ಇದೆ. ನನ್ನ ತಂದೆಗೆ ನಾವು ಒಟ್ಟು 6 ಜನ ಮಕ್ಕಳು. ಅವರೆಂದರೆ, ಅಬ್ದುಲ್ ಗಣಿಸಾಬ, ನಾನು, ಖಾಜಾಹುಸೇನಸಾಬ, ವಹಿದಾಬೇಗಂ, ಅಮೀನಾಬೇಗಂ, ಅಬೇದಾಬೇಗಂ. ನಾನು ನನ್ನ ದಾವೆಯಲ್ಲಿ ಅಬ್ದುಲ್‌ಗಣಿಸಾಬ ಮತ್ತು ಅಮೀನಾಬೇಗಂ ರವರನ್ನು ಪಾರ್ಟಿಯನ್ನಾಗಿ ಮಾಡಿಲ್ಲ ಎಂದರೆ ಸರಿ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಅವರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲಿಗಾಗಿ ಮುಂದಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು